19) ಅತಿಥಿ ಗೃಹ :

1)	ಮೊದಲನೆ ಮಹಡಿಯ ಕೊಠಡಿ 1ಕ್ಕೆ	125-00
2)	ನೆಲದ ಕೊಠಡಿಗಳು	95-00

20) ನಿರೀಕ್ಷಣಾ ಭವನ:

1)	ಪೂರ್ತಿ ಕಾಟೇಜು	500-00
2)	ಎ ವಿಭಾಗ (ಎ.ಸಿ.)	310-00
3)	ಬಿ ವಿಭಾಗ	185-00

21) ಎಸ್.ಪಿ : 2

1)	ಎ ವಿಭಾಗ	125-00

ರಾಜ್ಯದ ಧಾರ್ಮಿಕ ಇಲಾಖೆಯಲ್ಲಿ ಸೇವೆ ಮಾಡುತ್ತಿರುವರಿಗೆ ಮುಂಬಡ್ತಿ.

915. (1400) ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಸೇವೆಗೆ ಸೇರಿದ ದಿನಾಂಕದಿಂದ ಇಷ್ಟರವರೆವಿಗೂ ಕೇಂದ್ರ ಕಛೇರಿಯಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿ ಸೇವೆ ಮಾಡುತ್ತಿರುವ ನೌಕರ ಮತ್ತು ಅಧಿಕಾರಿಗಳ ಒಟ್ಟು ಸಂಖ್ಯೆ ಎಷ್ಟು (ವಿವರ ನೀಡುವುದು).

2) ಇವರಿಗೆ ಮುಂಬಡ್ತಿ ನೀಡಿ ಕೇಂದ್ರ ಕಛೇರಿಯಲ್ಲಿಯೇ ಮುಂದುವರಿಸಲು ಕಾರಣಗಳೇನು; ಇವರಿಗಿಂತ ದಕ್ಷ ಅಧಿಕಾರಿಗಳು ಇಲಾಖೆಯಲ್ಲಿ ಇಲ್ಲವೇ (ವಿವರ ನೀಡುವುದು).

3) ಈ ಅಧಿಕಾರಿಗಳನ್ನು ಕೇಂದ್ರ ಕಛೇರಿಯಿಂದ ವರ್ಗಾಯಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

1. (ವಿವರ ಲಗತ್ತಿಸಿದೆ)

1) ಎಸ್.ಆರ್. ಶೇಷಾದ್ರಿಭಟ್ಟರ್
2) ಎಂ.ಎ. ಜಗದೀಶ್
3) ಎಸ್. ನಾಗರಾಜ್

2. ಕೇಂದ್ರ ಕಛೇರಿಯಲ್ಲಿ ಮಾತ್ರ ಅಗಮ ವರ್ಗದ ಹುದ್ದೆ ಇರುವುದರಿಂದ ಕ್ರಮ ಸಂಖ್ಯೆ 1 ರಲ್ಲಿ ತಿಳಿಸಿದ ಅಧಿಕಾರಿಗೆ ಹಿರಿಯ ಅಗಮ ಪಂಡಿತರ ಹುದ್ದೆಗೆ ಪದೋನ್ನತಿ ನೀಡುವಾಗ ಸದರಿ ಹುದ್ದೆಗೆ ನೇಮಕಾತಿ ಮಾಡಲಾಯಿತು.

ಕ್ರಮ ಸಂಖ್ಯೆ 2 ಮತ್ತು 3 ಈ ನೌಕರರಿಗೆ ಪದೋನ್ನತಿ ನೀಡಿ ಆಡಳಿತಾತ್ಮಕ ಅವಶ್ಯಕಗಳಿಂದ ಹಾಗೂ ಇವರ ಕೆಲಸ ಕಾರ್ಯಗಳನ್ನು ಮನಗಂಡು ಕೇಂದ್ರ ಕಛೇರಿಯಲ್ಲಿಯೇ ಖಾಲಿ ಇದ್ದ ಹುದ್ದೆಗಳಲ್ಲಿ ನೇಮಕಾತಿ ಮಾಡಲಾಗಿದೆ.

3. ಇಲ್ಲ. ಅವಶ್ಯವಿದ್ದಲ್ಲಿ ಸೂಕ್ತ ಸಮಯದಲ್ಲಿ ಪರಿಶೀಲಿಸಲಾಗುವುದು.

ಧಾರ್ಮಿಕ ದತ್ತಿ ಇಲಾಖೆಯಲ್ಲಿ ಕೇಂದ್ರ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿ ಪದೋನ್ನತಿ ಹೊಂದಿದಮೇಲೂ ಆದೇ ಕಛೇರಿಯಲ್ಲಿ ಮುಂದುವರಿಯುತ್ತಿರುವವರ ವಿವರ

1)	ಎಸ್.ಆರ್. ಶೇಷಾದ್ರಿಭಟ್ಟರ್	ಕಿರಿಯ ಪಂಡಿತರು	20-6-69ರಂದು	ಕೇಂದ್ರ ಕಛೇರಿಯಲ್ಲಿ ಕರ್ತವ್ಯದ ಮೇಲೆ ಹಾಜರಾಗಿದ್ದಾರೆ.
	—"—	ಹಿರಿಯ ಪಂಡಿತರು	3-10-87	—"—
2)	ಎಂ.ಎ. ಜಗದೀಶ್	ಪ್ರ.ದ. ಸಹಾಯಕರು	9-2-84ರಂದು	ಕೇಂದ್ರ ಕಛೇರಿಯಲ್ಲಿ ಹುದ್ದೆಗೆ ಹಾಜರಾಗಿರುತ್ತಾರೆ.
	—"—	ಅಧೀಕ್ಷಕರಾಗಿ	30-11-96ರಂದು	—"— ಹಾಗೂ ಈ ದಿನಾಂಕದವರೆಗೆ ಕರ್ತವ್ಯವನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ.
3)	ಎಸ್. ನಾಗರಾಜ್	ದ್ವಿ.ದ. ಸಹಾಯಕರಾಗಿ	9-7-84ರಂದು	ಕೇಂದ್ರ ಕಛೇರಿಯಲ್ಲಿ ಹುದ್ದೆಗೆ ಹಾಜರಾಗಿರುತ್ತಾರೆ.
	—"—	ಪ್ರ.ದ. ಸಹಾಯಕರಾಗಿ	18-6-98ರಂದು	ಸ್ವತಂತ್ರ ಪ್ರಭಾರದಲ್ಲಿ ಪ್ರ.ದ. ಸಹಾಯಕರ ಹುದ್ದೆಯಲ್ಲಿ ಈ ದಿನಾಂಕದವರೆಗೆ ಕರ್ತವ್ಯವನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ.